ಮಾತಾಡಿಕೊಳ್ಳುತ್ತಿದ್ದರು. ಆದರೂ ಮನಸ್ಸಿನ ಆತಂಕ ಕಳೆಯದಂಗಾಗಿತ್ತು. ಆಗ, ಕೋಣೆಯ ಒಂದು ಮೂಲೆಯಲ್ಲಿದ್ದ ತೂಗುಮಂಚದಲ್ಲಿ ಬಂದು ಕುಂತರು. ನಿಟ್ಟುಸಿರು ತಾನಾಗಿಯೇ ಹೊರಬಂತು ವಿನಃ ಮನಸ್ಸಿನ ತಳಮಳ ಮಾತ್ರ ಕಮ್ಮಿಯಾಗಲಿಲ್ಲ. ಮೊದಲೆಲ್ಲ ಸುಸ್ತು, ಬೇಸರ, ಸಂಕಟ ಎನಿಸಿದಾಗಲೆಲ್ಲ ಇದೇ ತೂಗುಮಂಚದಲ್ಲಿ ಕುಂತರೆ ಸಾಕು ಮನಸ್ಸು ಹಗುರಾಗುತ್ತಿತ್ತು. ಈಗ ಅದೆಲ್ಲ ನೆನಪಾಗಿ ಒಳಗೊಳಗೆ ಚಡಪಡಿಸಿದರು. ಕಳೆದ ನಾಕಾರು ದಿನಗಳಿಂದಲೂ ಏನೇನೋ ಆಲೋಚನೆಗಳು ತಲೆಯೊಳಗೆ ತುಂಬಿಕೊಂಡು ಮನಸ್ಸಿನೊಂದಿಗೆ ದೇಹವೂ ಸಹ ಸಾಕಷ್ಟು ದಣಿದಿತ್ತು. ಅದು ಅವರನ್ನು ಹೈರಾಣಾಗಿಸಿತ್ತು. ಅದರಲ್ಲೂ ಮೊನ್ನೆ ದಿನ ಗಂಗಾಧರಯ್ಯಸ್ವಾಮಿಗಳ ಕಾಲದಿಂದಲೂ ಮಠಕ್ಕೆ ನಡೆದುಕೊಳ್ಳುತ್ತಿದ್ದ ತಳವಾರ ಭೀಮವ್ವ ಉರುಲ್ಹಾಕ್ಕೊಂಡು ಸತ್ತು ಹೋದ ಸುದ್ದಿ ಕೇಳಿದ ಮೇಲಂತೂ ಅವರ ಜಂಘಾಬಲವೇ ಉಡುಗಿ ಹೋಗಿತ್ತು. ಇದರಿಂದ ಕಂಗಾಲಾಗಿ ಹೋಗಿದ್ದರು. ಆದರೂ ತಮ್ಮಷ್ಟಕ್ಕೆ ತಾವೇ ಸುಧಾರಿಸಿಕೊಂಡು ಏನೂ ಆಗೇ ಇಲ್ಲ ಎಂಬಂತಿದ್ದರು. ಒಂದೆರಡು ದಿನಗಳ ಮಟ್ಟಿಗೆ ಎಲ್ಲವನ್ನೂ ಮರೆತು ತುಸು ಗೆಲುವಾಗಿದ್ದರು. ಇನ್ನೇನು ಈ ಶ್ರಾವಣ ಮಾಸದಲ್ಲಿನ 'ಬಸವ ಪುರಾಣ' ಹೇಳುವ ಕಾರ್ಯಕ್ರಮ ಮುಗಿದ ಮೇಲೆ ಎಲ್ಲವನ್ನೂ ಸರಿಪಡಿಸಿಕೊಳ್ಳಬೇಕೆಂದುಕೊಂಡಿದ್ದರು. ಆದರೆ, ನಿನ್ನೆ ದಿನ ರಾತ್ರಿ ಮಲಗುವ ಹೊತ್ತಿಗೆ ಮಠದಲ್ಲಿ ಗಂಗಾಧರಯ್ಯಸ್ವಾಮಿಗಳ ಗದ್ದುಗೆ ಪೂಜೆ ಮಾಡುತ್ತಿದ್ದ ಕಲ್ಲಯ್ಯಸ್ವಾಮಿ ವಿಶ್ರಾಂತಿ ಕೋಣೆಗೆ ಬಂದು, 'ಅಪ್ಪಗೋಳ, ಘಾತ ಆಗೇದರಿ! ಊರಾಗಿನ ಜನ್ರು ಮಠದ ವಿಚಾರದಾಗ ಏನಕೇನರೆ ಗುಸುಗುಸು ಅಂತ ತಮ್ಮೊಳಗನ ಮಾತಾಡ್ಕೊಳ್ಳಾಕತ್ತ್ಯಾರು! ನನ್ನ ಬಾಯಿಂದ ಅದನ್ನೆಲ್ಲ ಹೆಂಗ ಹೇಳಲ್ರಿ!? ನನ್ಗ ಏನೂ ತಿಳೀವಲ್ದಾಗೇದ...' ಎಂದು ಸಣ್ಣ ದನಿಯಲ್ಲಿ ಮತ್ತೇನೇನೋ ಹೇಳಿ ಹೋದಾಗಿನಿಂದ ಪಂಚಯ್ಯಸ್ವಾಮಿಗಳು ಮತ್ತೇ ಚಿಂತೆಯೊಗೆ ಮುಳುಗಿ ಹೋಗಿದ್ದರು. ಮುಂದೇನು ಮಾಡಬೇಕೆಂದು ತಿಳಿಯದಂಗಾಗಿ ಒಳಗೊಳಗೆ ನೋವಿನಲ್ಲಿ ಬೇಯುತ್ತಿದ್ದ ಅವರ ಕಣ್ಣಿಗೆ ಇಡೀ ರಾತ್ರಿ ನಿದ್ದೆಯೇ ಇಲ್ಲದಂಗಾಗಿತ್ತು. ಅಷ್ಟರ ಮಟ್ಟಿಗೆ ಹೌಹಾರಿದಂಗಾಗಿದ್ದರು. ಅದೇ ಸ್ಥಿತಿಯಲ್ಲಿ ರಾತ್ರಿಯನ್ನು ಸವೆಸಿದ್ದ ಅವರು ಬೆಳಕು ಹರಿಯುತ್ತಿದ್ದಂಗೆ ವಿಶ್ರಾಂತಿ ಕೋಣೆಯಿಂದ ಎದ್ದು ಹೋಗಿ ಅವಸರದಲ್ಲಿ ನಿತ್ಯಕರ್ಮಗಳನ್ನು ಮುಗಿಸಿಕೊಂಡವರೆ ಲಿಂಗಪೂಜೆ ಮಾಡಿಕೊಂಡು ಬಂದು ಮತ್ತೇ ವಿಶ್ರಾಂತಿ ಕೋಣೆಯನ್ನು ಹೊಕ್ಕು ಕದವನ್ನು ಹಾಕಿಕೊಂಡವರು ಇದುವರೆಗೂ ಹೊರಗೆ ಬಂದಿರಲಿಲ್ಲ! ಆಕ್ಷಣದಿಂದಲೂ ಅವರಿಗೆ ಇನ್ನಿಲ್ಲದ ಭಯ, ಸಂಕಟ ಮತ್ತು ಚಡಪಡಿಕೆ ಶುರುವಾಗಿತ್ತು.

ಆದರೆ, ಖರೇ ಹೇಳಬೇಕೆಂದರೆ ಇದೆಲ್ಲ ಶುರುವಾಗಿದ್ದು ಈಗ ಹತ್ತು ಹನ್ನೆರಡು ವರ್ಷಗಳ ಹಿಂದೆ!

* * *

'ಯಪ್ಪ, ತಂದೆ, ನನ್ನ ಬಿಟ್ಟು ಹೋಗ್ಬ್ಯಾಡ ನಿಂದ್ರು... ನಿನ್ನ ಕೂಡ ನಾನೂ ಬರತೀನಿ...' ಎಂದು ಚೀರುತ್ತ ವಿಶ್ರಾಂತಿ ಕೋಣೆಯಲ್ಲಿ ಪಲ್ಲಂಗದ ಮೇಲೆ ಮಲಗಿದ್ದ ಗಂಗಾಧರಯ್ಯಸ್ವಾಮಿಗಳು ತಟಕ್ಕನೆ ಎದ್ದು ಕುಂತರು!

ಅವರು ಹಾಗೆ ಚೀರಿದ ಸದ್ದಿಗೆ ಹೊರಗೆ ಕೋಣೆಯ ಬಾಗಿಲಿಗೆ ತಲೆಯಿಟ್ಟು ಮಲಗಿದ್ದ ಮಾರುತಿಗೆ ಎಚ್ಚರವಾಗಲು ಗಾಬರಿಯಿಂದ ಎದೆಯಲ್ಲಿ ಸಳಸಳನೆ ನೀರಾಡಿದಂಗಾಯಿತು. ಆತ ಅವಸರದಲ್ಲಿ ಹಾಸುಗೆಯಿಂದ ಎದ್ದು ಮುಂದು ಮಾಡಿದ ಬಾಗಿಲನ್ನು ತೆರೆದು ಕೋಣೆಯೊಳಗೆ ಓಡಿ ಹೋದ. ಜೀಂಯ... ಗುಟ್ಟುವ ನೀರವ ಮೌನ ತುಂಬಿದ ಆ ಕೋಣೆಯಲ್ಲಿ ಝೀರೋ ಬಲ್ಬಿನ ಮಂದ ಬೆಳಕು ಹರಡಿಕೊಂಡಿತ್ತು. ಆ ಬೆಳಕಿನಲ್ಲಿ ಪಲ್ಲಂಗದ ಮೇಲೆ ಕಾವಿ ಬಣ್ಣದ ಬಟ್ಟೆಯನ್ನು ಹಾಸಿದ ಗಾದಿಯ ಮೇಲೆ ಏದುಸಿರು ಬಿಡುತ್ತ ಕುಂತಿದ್ದ ಗಂಗಾಧರಯ್ಯಸ್ವಾಮಿಗಳ ಪಕ್ಕದಲ್ಲಿ ಬಂದು ಕುಂತ. ಆತ, 'ಅಪ್ಪಗೋಳ, ಏನಾಗೆದ ನಿಮ್ಗ? ಹಿಂಗ್ಯಾಕ ಮಾಡಾಕತ್ತೀರಿ? ನೀವು ಹಿಂಗೆಲ್ಲ ಮಾಡಿದ್ರ ನನ್ಗ ಹೆದ್ರಿಕಿ ಆಗ್ತದ...' ಎಂದು ಕಣ್ಣಿಗೆ ನೀರು ತಂದ. ಆಗ, ಗಂಗಾಧರಯ್ಯಸ್ವಾಮಿಗಳು ತಮಗರುವಿಲ್ಲದಂಗೆ ದೃಷ್ಟಿಯನ್ನು ಕದಲಿಸಿದರು.

'ಮಾರುತಿ, ನನ್ಗ ಏನಾಗೆದ!? ನೀ ಇಟ್ಹೊತಂಕ ಎಲ್ಲಿ ಹೋಗಿದ್ದಿ? ಮರಿಸ್ವಾಮಿಗೋಳ ಎಲ್ಲೆದಾರು?' ಎಂದು ಒಂದೊಂದೇ ಮಾತಿನಲ್ಲಿ ಕೇಳಿ ಶೂನ್ಯದಲ್ಲಿ ದೃಷ್ಟಿ ನೆಟ್ಟರು. ಆ ಹೊತ್ತಿನಲ್ಲಿ ಅವರು ದೈಹಿಕವಾಗಿ ಸಾಕಷ್ಟು ಹೈರಾಣಾಗಿದ್ದರು.